ಉ) ಬೆಂಗಳೂರು ನಗರದ ಬೆಳವಣಿಗೆಗೆ ತಕ್ಕಂತೆ ಪೊಲೀಸ್ ವ್ಯವಸ್ಥೆಯನ್ನು ಚುರುಕುಗೊಳಿಸಲು ಈ ಕೆಳಕಂಡ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ:-

1) ಬೆಂಗಳೂರು ನಗರದಲ್ಲಿ ಹೊಸದಾಗಿ ಸಿಬ್ಬಂದಿ ಮತ್ತು ಇತರೆ ಸಲಕರಣೆಗಳೊಂದಿಗೆ ಆಗ್ನೇಯ ವಿಭಾಗ ಸೃಜನೆ.

2) ಬೆಂಗಳೂರು ಸಂಚಾರಿ ವ್ಯವಸ್ಥೆಯನ್ನು ಬಲವೃದ್ಧಿಗೊಳಿಸಲು ಬೆಂಗಳೂರು ನಗರದ ಸಂಚಾರ ವಿಭಾಗಕ್ಕೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್.ಡಿ/136/ಪಿಒಪಿ/2005, ದಿ: 22.12.2005 ರಲ್ಲಿ ಪಿಐ-6, ಪಿ.ಎಸ್.ಐ-82, ಎ.ಎಸ್.ಐ.-214, ಹೆಚ್.ಸಿ-390 ಮತ್ತು ಪಿಸಿ-300 ಒಟ್ಟಾರೆ 992 ಹುದ್ದೆಗಳ ಮಂಜೂರಾತಿ.

3) ಬೆಂಗಳೂರು ನಗರದಲ್ಲಿ ಹೊಸದಾಗಿ ಸರ್ಕಾರಿ ಆದೇಶ ಸಂಖ್ಯೆ :ಹೆಚ್.ಡಿ/9/ಪಿಒಪಿ/2003, ದಿನಾಂಕ: 2.2.2005ರಲ್ಲಿ ಚೆನ್ನಮ್ಮನಕೆರೆ ಅಚ್ಚುಕಟ್ಟು ಪ್ರದೇಶ ಪೊಲೀಸ್ ಠಾಣೆ ಮಂಜೂರಾತಿ, ಇತ್ಯಾದಿ.

475 (751) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ ಕ್ಷೇತ್ರ):ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕರ್ನಾಟಕ ಸಮಗ್ರ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರಕ್ಕೆ ಕರ್ನಾಟಕ ಸರ್ಕಾರ ಯಾವ ಯಾವ ಬೇಡಿಕೆಗಳನ್ನು ಸಲ್ಲಿಸಿದೆ.

ಆ) ಕರ್ನಾಟಕ ಸಮಗ್ರ ರೈಲ್ವೆ ಬೇಡಿಕೆಗಳು ಯಾವುವು;

ಇ) ಕೇಂದ್ರ ಸರ್ಕಾರದ ರೈಲ್ವೆ ಬೇಡಿಕೆಗಳ ಬಗ್ಗೆ ಕೈಗೊಂಡಿರುವ ಕ್ರಮಗಳೇನು;

ಈ) ಮೆಟ್ರೋ ರೈಲ್ವೆ ಯೋಜನೆಯ ಗಾತ್ರವೆಷ್ಟು; ಇದರ ಮೊತ್ತವೆಷ್ಟು;

ಉ) ಇದನ್ನು ಯಾವಾಗ ಜಾರಿಗೊಳಿಸಲಾಗುವುದು:

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು):

ಅ) ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಸ್ಯಾಟ್‌ಲೈಟ್ ವರ್ತುಲ ರಸ್ತೆ ಸುಮಾರು 282 ಕಿ.ಮೀ. ಮತ್ತು ಮಧ್ಯಂತರ ವರ್ತುಲ ರಸ್ತೆ ಸುಮಾರು 178 ಕಿ.ಮೀ. ರಸ್ತೆಗಳನ್ನು ನಿರ್ಮಿಸಲು ಪ್ರಸ್ತಾವನೆಯನ್ನು ಭಾರತ ಸರ್ಕಾರಕ್ಕೆ ಕಳುಹಿಸಿದೆ.

ಆ) ಮಾನ್ಯ ಮುಖ್ಯ ಮಂತ್ರಿಯವರು ದಿನಾಂಕ 14.2.2006ರಂದು ಮಾನ್ಯ ಕೇಂದ್ರ ರೈಲ್ವೆ ಸಚಿವರನ್ನು ದೆಹಲಿಯಲ್ಲಿ ಭೇಟಿ ಮಾಡಿ ರಾಜ್ಯದಲ್ಲಿನ ರೈಲ್ವೆ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸುವ ಬಗ್ಗೆ ಚರ್ಚಿಸಿ ಒಂದು ಮೆಮೊರ್ಯಾಂಡಮ್ ಅನ್ನು ಸಲ್ಲಿಸಿರುತ್ತಾರೆ. ಮೆಮೊರ್ಯಾಂಡಮ್‌ನಲ್ಲಿ ಪ್ರಸ್ತಾಪಿಸಿರುವ ರೈಲ್ವೆ ಯೋಜನೆಗಳು ಈ ಕೆಳಕಂಡಂತಿವೆ:

1. ಬೆಂಗಳೂರು-ಕೆಂಗೇರಿ-ಕೆಂಗೇರಿ-ರಾಮನಗರಂ ಜೋಡಿ ರೈಲು ಮಾರ್ಗ

2. ಬಿಜಾಪುರ -ಗದಗ್ ರೈಲು ಗೇಜು ಪರಿವರ್ತನೆ ಯೋಜನೆ

3. ಹಾಸನ– ಮಂಗಳೂರು ಗೇಜು ಪರಿವರ್ತನೆ ಯೋಜನೆ

4. ಹುಬ್ಬಳ್ಳಿ– ಅಂಕೋಲ ಹೊಸ ರೈಲು ಮಾರ್ಗ

5. ಕೊಟ್ಟೂರು – ಹರಿಹರ ಹೊಸ ರೈಲು ಮಾರ್ಗ

ಅಲ್ಲದೆ, ರಾಮನಗರಂನಿಂದ ಮೈಸೂರು ವರೆಗಿನ ಜೋಡಿ ರೈಲು ಮಾರ್ಗ ಯೋಜನೆಯ 2/3 ರಷ್ಟು ವೆಚ್ಚವನ್ನು ಮತ್ತು ಬೀದರ್ – ಗುಲ್ಬರ್ಗಾ ಹೊಸ ರೈಲು ಮಾರ್ಗದ ಉಳಿದ ವೆಚ್ಚದ ಸ್ವಲ್ಪ ಭಾಗವನ್ನು ಭರಿಸಲು ರಾಜ್ಯ ಸರ್ಕಾರ ಒಪ್ಪಿದ್ದು, ಕೇಂದ್ರದ ಅನುಮೋದನೆ ನಿರೀಕ್ಷಿಸಲಾಗಿದೆ.

ರಾಜ್ಯದಲ್ಲಿನ ರೈಲ್ವೆ ಯೋಜನೆಗಳಿಗೆ ಕೇಂದ್ರವು 2006–07ನೇ ಸಾಲಿನ ರೈಲ್ವೆ ಆಯವ್ಯಯದಲ್ಲಿ ರೂ. 360 ಕೋಟಿಗಳ ಒದಗಣೆ ಮಾಡಿದೆ.

ಈ. ಉದ್ದೇಶಿತ ಮೆಟ್ರೋ ರೈಲು ಯೋಜನೆಯು 33 ಕಿ.ಮೀ. ಉದ್ದವಾಗಿದ್ದು, ಎರಡು ಮಾರ್ಗಗಳನ್ನು ಅಂದರೆ ಪೂರ್ವ – ಪಶ್ಚಿಮ ಹಾಗೂ ದಕ್ಷಿಣೋತ್ತರ ಮಾರ್ಗಗಳನ್ನು ಹೊಂದಿರುತ್ತದೆ. ಪೂರ್ವ –ಪಶ್ಚಿಮ ಮಾರ್ಗವು 18.1 ಕಿ.ಮೀ. ಉದ್ದ ಹಾಗೂ ದಕ್ಷಿಣೋತ್ತರ ಮಾರ್ಗವು 14.9 ಕಿ.ಮೀ.

ಇದರ ಪರಿಷ್ಕೃತ ಅಂದಾಜು ವೆಚ್ಚವು ರೂ. 6395 ಕೋಟಿಗಳು. ಈ ಮೊತ್ತದಲ್ಲಿ ಕರ್ನಾಟಕ ಸರ್ಕಾರದ ಷೇರು ಶೇ.15 ವಂತಿಕೆ ರೂಪದಲ್ಲೂ, ಶೇ.15 ಸಾಲದ ರೂಪದಲ್ಲಿಯೂ ಅಂದರೆ ಶೇ.30 ಕರ್ನಾಟಕ ಸರ್ಕಾರವು ಭರಿಸಬೇಕಾದ ವೆಚ್ಚವಾಗಿರುತ್ತದೆ. ಕೇಂದ್ರ ಸರ್ಕಾರದ ವಂತಿಕೆಯು ಶೇ.15 ಮತ್ತು ಸಾಲ ರೂಪದಲ್ಲಿ ಶೇ.10 ಒಟ್ಟು ಶೇ.25 ಕೇಂದ್ರ ಸರ್ಕಾರವು ಭರಿಸಬೇಕಾದ ವೆಚ್ಚವಾಗಿದ್ದು, ಉಳಿದ ಶೇಕಡ 45ರಷ್ಟು ಸಾಲವಾಗಿ ಜಪಾನ್ ಬ್ಯಾಂಕ್ ಆಫ್ ಇಂಟರ್ ನ್ಯಾಷನಲ್ ಕೋ–ಆಪರೇಷನ್ ಮತ್ತು ಇತರೆ ಬ್ಯಾಂಕುಗಳಿಂದ ಪಡೆಯಲಾಗುವುದು.

ಉ. ಅಕ್ಟೋಬರ್, 2006ರಲ್ಲಿ ಪ್ರಾರಂಭಿಸಲಾಗುವುದು.

478 (766) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ): ಮಾನ್ಯ ಪ್ರವಾಸೋದ್ಯಮ, ಜವಳಿ, ಮೂಲ ಸೌಕರ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಕೇಂದ್ರ ಸರ್ಕಾರದಿಂದ ಪ್ರವಾಸೋದ್ಯಮಕ್ಕೆ ಗುರುತಿಸಿರುವ ಸ್ಥಳಗಳು ಯಾವುವು (ಜಿಲ್ಲೆಯ ತಾಲ್ಲೂಕುವಾರು ಎಲ್ಲಾ ವಿವರ ನೀಡಿರಿ);

ಆ) ಇವುಗಳ ಅಭಿವೃದ್ಧಿಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ ಹಾಗೂ ಇದಕ್ಕೆ ಯಾವ ಯೋಜನೆ ಕಾರ್ಯಕ್ರಮಗಳಿಂದ ಅನುಷ್ಠಾನ ಗೊಳಿಸಲಾಗುವುದು; ಇದಕ್ಕಾಗಿ ನಿಗಧಿಪಡಿಸಿದ, ಖರ್ಚು ಮಾಡಿದ ಹಾಗೂ ಬಾಕಿ ಇರುವ ಹಣದ ವಿವರಗಳೇನು (ಕಳೆದ ಎರಡು ವರ್ಷದ ವಿವರ ನೀಡಿರಿ);

ಇ) ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರದ ಕ್ರಮಗಳೇನು ಹಾಗೂ ರಾಜ್ಯ ಗುರುತಿಸಿರುವ ಸ್ಥಳ, ತೆಗೆದುಕೊಂಡ ಕ್ರಮದ ವಿವರ ಒದಗಿಸುವುದು;

ಈ) ಇದಕ್ಕಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಆಯ್ಕೆ ಮಾಡಿದ ಕೇಂದ್ರಗಳ ವಿವರ ಒದಗಿಸುವುದು?